ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **269/2020**

| | | |
|---|---|---|
| ಸಾಕ್ಷಿಯ ಹೆಸರುಃ | ಗುಂಡುರಾವ್ | ಪ್ರಾಸಾಃ 1 |
| ತಂದೆ/ಗಂಡನ ಹೆಸರುಃ | ಯಲ್ಲಪ್ಪ | ಚಾಸಾಃ 1 |
| ವಯಸ್ಸು ಃ | 42 ವರ್ಷ | ದಿಃ 23-01-2025 |
| ಉದ್ಯೋಗಃ | ಸಿ.ಪಿ.ಐ ದೇವದುರ್ಗ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ದೇವದುರ್ಗ. | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು ದಿನಾಂಕಃ 28-06-2019 ರಿಂದ 03-02-2020 ರವರೆಗೆ ಸೈದಾಪೂರ ಪೋಲಿಸ ಠಾಣೆಯಲ್ಲಿ ನಾನು ಪಿ.ಎಸ್.ಐ ಎಂದು ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 17-12-2019 ರಂದು ಮದ್ಯಾಹ್ನ 3.00 ಗಂಟೆ ಸುಮಾರಿಗೆ ನಾನು ಪೆಟ್ರೋಲಿಂಗ್ ಕರ್ತವ್ಯದಲ್ಲಿರುವಾಗ ತುರಕನದೊಡ್ಡಿ ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದ ಮೇರೆಗೆ ಚಾಸಾಃ 2 ಮತ್ತು 3 ರವರು ಬರಮಾಡಿಕೊಂಡು ದಾವಾ ಬಗ್ಗೆ ಮಾಹಿತಿ ನೀಡಿ, ಚಾಸಾಃ 2 ರಿಂದ 5 ರವರೊಂದಿಗೆ ತುರಕನದೊಡ್ಡಿ ಗ್ರಾಮದ ಆಂಜನೆಯ ದೇವಸ್ಥಾನದ ಹತ್ತಿರ ಹೋಗಿ ನೋಡಲಾಗಿ ಒಯಿ ಕಿರಾಣಿ ಅಂಗಡಿಯ ಮುಂದೆ ಒಬ್ಬ ವ್ಯಕ್ತಿ ತನ್ನ ಅಂಗಡಿಯ ಮುಂದೆ ಸರ್ವಜನಿಕ ಸ್ಥಳದಲ್ಲಿ ಮದ್ಯ ಮಾರಾಟ ಮಾಡುತ್ತಿರುವುದನ್ನು ನೋಡಿ 3.20 ಕ್ಕೆ ದಾಳಿ ಮಾಡಿದಾಗ ಆರೋಪಿತನು ಓಡಿ ಹೋಗಿರುತ್ತಾನೆ. ಸದರಿ ಆರೋಪಿತನ ವಿವರವನ್ನು ಚಾಸಾಃ 6 ರವರ ಕಡೆಯಿಂದ ಕೇಳಿದಾಗ ಆರೋಪಿತನ ಹೆಸರು ಸಣ್ಣ ಸಿದ್ದಲಿಂಗ ಎಂದು ಹೇಳಿರುತ್ತಾನೆ. ನಂತರ ಸ್ಥಳದಲ್ಲಿ 650 ಎಮ್, ಎಲ್ ನ ಕೆಫ್ 5 ಬಾಟಲಿ , 330 ಎಮ್. ಎಲ್ ನ 15 ಬಾಟಲಿ, 150 ಎಮ್, ಎಲ್ ನ ಓಟಿ ಪೌಚ್ 4, ಮತ್ತು ಓಸಿ 180 ಎಮ್, ಎಲ್ 9 ಪೌಚ್, ಇಂಪಿರಿಯಲ್ ಬ್ಲೂ 4 ಪೌಚ್, ಸ್ಥಳದಲ್ಲಿ 200/-ರೂ. ಹಣ ಇತ್ತು ಅದನ್ನು ಪಂಚರ ಸಮಕ್ಷಮದಲ್ಲಿ ಜಪ್ತಿಪಡಿಸಿಕೊಂಡು ಸ್ಥಳದಲ್ಲಿ 3.20 ರಿಂದ 4.30 ರವರೆಗೆ ಜಪ್ತಿ ಪಂಚನಾಮೆಯನ್ನು ಜರುಗಿಸಿ ಸೀಲ್ ಹಾಕಿರುತ್ತೇನೆ. ಜಪ್ತಿ ಪಡಿಸಿದ ಮು. ಮಾ.ಗಳಿಂದ ಪ್ರತಿ ಬಾಟಲಿಯಿಂದ ಒಂದೊಂದು ಸ್ಯಾಂಪಲ್ ಎಫ್. ಎಸ್. ಎಲ್ ಗಾಗಿ ಪಡೆದುಕೊಂಡು ಮರಳಿ ಠಾಣೆಗೆ ಬಂದು ಚಾಸಾಃ 8 ರವರಿಗೆ ಮು. ಮಾ. ಮತ್ತು ಇತರ ವರದಿಗಳನ್ನು ನೀಡಿರುತ್ತೇನೆ. ಸಾಕ್ಷಿಯು ಆರೋಪಿತನನ್ನು ನೋಡಿ ಗುರುಸಿರುತ್ತಾರೆ. ಸಾಕ್ಷಿಯು ವಶಪಡಿಸಿಕೊಂಡಿರುವ ಬಾಟಲಿಗಳನ್ನು

ಗುರುತಿಸಿರುವುದರಿಂದ ಅದನ್ನು ಮು. ಮಾ. 5 ಎಂದು ಗುರುತಿಸಲಾಯಿತು. ನಾನು ಜಪ್ತಿ ಪಡಿಸಿದ ಹಣವನ್ನು ನೋಡಿದರೆ ಗುರುತಿಸುತ್ತೇನೆ. ಜಪ್ತಿ ಪಂಚನಾಮೆಯನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಜ್ಞಾಪನಾ ಪತ್ರವನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಆರೋಪಿ ಪರ ಶ್ರೀ . ಕೆ. ಬಿ. ಎ. ವಕೀಲರಿಂದ.</u>

1. ನಾವು ಮಾದ್ವಾರ ಮತ್ತು ತುರಕನದೊಡ್ಡಿ ಗ್ರಾಮದಲ್ಲಿ ಗಸ್ತಿಗೆ ಇದ್ದೇವು. ಮದ್ಯಾಹ್ನ 3.00 ಗಂಟೆಗೆ ತುರಕನದೊಡ್ಡಿ ಗ್ರಾಮಕ್ಕೆ ಹೋಗುತ್ತಿದ್ದೇವು. ನಾವು ಸರಕಾರಿ ವಾಹನ ಕೆಎ-33-ಜಿ-009 ಮೂಲಕ ಹೋಗುತ್ತಿದ್ದೇವು. ನಮ್ಮ ಪಂಚನಾಮೆಯಲ್ಲಿ ಸರಕಾರಿ ವಾಹನದ ಬಗ್ಗೆ ನಮೂದು ಇರುವುದಿಲ್ಲ. ತುರಕನದೊಡ್ಡಿ ಗ್ರಾಮ ನಾವು ಹೋಗುವಾಗ 2-3 ಕಿ.ಮೀ. ಅಂತರದಲ್ಲಿತ್ತು. ನಾವು ತುರಕನದೊಡ್ಡಿಗೆ ಹೋಗಲು 5 ರಿಂದ 10 ನಿಮಿಷ ಬೇಕಾಯಿತು. ಚಾಸಾಃ 2 ಮತ್ತು 3 ರವರನ್ನು ಚಾಸಾಃ 5 ರವರು ಮಾದ್ವಾರದಿಂದ ಕರೆದುಕೊಂಡು ಬಂದಿರುತ್ತಾರೆ. ಸದರಿ ನಾವು ಗಸ್ತಿಗೆ ಮೂರು ಜನ ಹೋಗಿರುತ್ತೇವೆ, ಮೂರು ಜನ ನನ್ನ ಜೊತೆಗೆ ಬಂದಿರುತ್ತಾರೆ. ಚಾಸಾಃ 2 ಮತ್ತು 3 ರವರು ಮಾದ್ವಾರ ಗ್ರಾಮದಲ್ಲಿ ಎಲ್ಲಿ ಇದ್ದರು ಎಂದು ಹೇಳಲು ಬರುವುದಿಲ್ಲ, ಚಾಸಾಃ 5 ರವರು ಕರೆದುಕೊಂಡು ಬಂದಿರುತ್ತಾರೆ.

2. ಸದರಿ ಕಿರಾಣಿ ಅಂಗಡಿ ಬಗ್ಗೆ ಮಾಹಿತಿ ಪಡೆದುಕೊಂಡಿರುತ್ತೀರಾ? ಎಂದರೆ ಸಾಕ್ಷಿಯು ಆರೋಪಿತನದ್ದು ಇರುತ್ತದೆ ಎಂದು ಹೇಳುತ್ತಾರೆ. ನಾನು ಆರೋಪಿತನ ಅಂಗಡಿ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಅದು ತನಿಖಾದಿಕಾರಿಗಳ ಕೆಲಸ ಇರುತ್ತದೆ ಎಂದು ನುಡಿಯುತ್ತಾರೆ. ನಾವು ದೇವಸ್ಥಾನ ಹತ್ತಿರ 2-3 ನಿಮಿಷಗಳ ಕಾಲ ನಿಂತು ನೋಡಿರುತ್ತೇವೆ. ಮಾರಾಟ ಮಾಡುವ ಸಮಯದಲ್ಲಿ ಗ್ರಾಹಕರು ಇದ್ದರು. ಸದರಿ ಒಬ್ಬ ಸಾಕ್ಷಿದಾರ ಚಾಸಾಃ 6 ರವರನ್ನು ವಿಚಾರಣೆ ಮಾಡಿರುತ್ತೇವೆ. ಖರೀದಿ ಮಾಡುವ ವ್ಯಕ್ತಿಗಳನ್ನು ವಿಚಾರಣೆ ಮಾಡಿರುತೀರಾ? ಎಂದರೆ ಸಾಕ್ಷಿಯು ಓಡಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 100/-ರೂ. ಮುಖ ಬೆಲೆಯ ನೋಟು ಇದ್ದವು. ಸದರಿ 200/-ರೂ. ಹಣವನ್ನು ಬಿದ್ದುದನ್ನು ತೆಗೆದುಕೊಂಡಿರುತ್ತೇವೆ. ಸದರಿ ಮು. ಮಾ. 1 ರಿಂದ 5 ಇವು ಸಾರಾಯಿ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ.

3. ನಿಪಿ-1 ನ್ನು ನಾನೇ ಬರೆದಿರುತ್ತೇನೆ. ಸ್ಥಳದ ಚಕಬಂದಿ ನನಗೆ ಹೇಳಲು ಬರವುದಿಲ್ಲ. ಸದರಿ ಮು. ಮಾ. ಮತ್ತು ಆರೋಪಿತರಿಗೆ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ.

ತುರಕನದೊಡ್ಡಿಯಿಂದ ಪೊಲಿಸ ಠಾಣೆಗೆ 5.30 ಗಂಟೆಗೆ ಬಂದಿರುತ್ತೇನೆ. ತುರಕನದೊಡ್ಡಿ ಬಿಟ್ಟು ಬೇರೆ ಊರಿಗೆ ಗಸ್ತು ಕೆಲಸಕ್ಕೆ ಹೋಗಿರುತ್ತೀರಾ? ಎಂದರೆ ಸಾಕ್ಷಿಯು ಜಪ್ತಿ ಮಾಡಿಕೊಂಡು ಠಾಣೆಗೆ ಬಂದಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಮೇಲಾಧಿಕಾರಿಗಳ ಮಾತು ಕೇಳಿ ಠಾಣೆ ಅಂಕಿ-ಸಂಖ್ಯೆಗೊಸ್ಕರ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ